ಬಿಂದಗಿ ಬಗ್ಯಾಗಿ ಬರತಕ್ಕ ಸುಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಕ್ಕಮ್ಮಬಸಮ್ಮ ಇವರ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟಿ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪ ಕಬಿಸಪ್ಪ ಇವರ ಆಸ್ತಿಗೆ ಹಕ್ಕುದಾರರಾದ ವಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಆಗಸ್ಟ್ಟ ತಿಂಗಳು 7ನೇ ತಾರಿಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಜನೆ ಕೊಡೋಣಾಗಿಧೆ.

ಸಿ. ಕ್ರೈಸ್,
ಸಬ ಜಡ್ಜ.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 9ನೇ ಆಗಸ್ಟು 1885.

1885ನೇ ಇಸವಿ ಆಗಸ್ಟು ತಾರೀಖು 8ನೇ ಶನಿವಾರದ ದಿವಸ ಸೆಂಟ್ರಲ್ ಜೆಯಿಲ್ ತೋಟದಿಂದ ಫರಾರಿಯಾದ ಖೈದಿಯ ಜಹರೆಪಟ್ಟಿ.

ಜೈಲ್ ನಂಬರ್—7070. ಹೆಸರು ತಂದೆ ಹೆಸರು—ತಿಪ್ಪಿಗಾಡು ಯಂಬುವನ ಮಗ ನರಸಿಗ. ವರ್ತ—ಬಾಗೇನಹಳ್ಳಿ ತಾಲ್ಲೂಕು ದೇವರಾಜನವಲ್ಲಿ. ಜಾತಿ ಕಸಬು—ಪೇಡರ್ ಕೂಲಿ. ವಯಸ್ಸು ಯತ್ತರ—22 ವರುಷ 5 ಅಡಿ 3 ಅಂಗುಲ. ತಕಸೀರು ಸಜಾ ತಾರೀಖು ವಾಯಿದೆ ವಗೈರೆ—ಜೋರಿ ಯಿರಾದೆಯಿಂದ ರಾತ್ರೆ ಮನೆನುಗ್ಗಿದ ತಕಸೀರಿಗೆ 1885ನೇ ಇನವಿ ಜುಲೈ ತಾರೀಖು 15ರ ಲಾಗಾಯಿತು 6 ತಿಂಗಳು ಕಠಿಣ ಸಜಾ. ಸಜಾ ಕೊಟ್ಟ ಕೋರ್ಟು—ಕೋಲಾರದ ಜನರಲ್ ಅ|| ಕಮ್ಮಿಷನರವರ ಕೋರ್ಟು ಕೇಸ್ ನಂಬರ್ 31 ರಲ್ಲು. ಚಹರೆ ತಪಸೀಲ್—ಹೊಟ್ಟೆ ಮೇಲೆ 6 ಮಚ್ಚೆಗಳು, ಯಜತೊಡೆ ಪೊಳಪಾರ್ಶ್ವ 3, ಹೊರಪಾರ್ಶ್ವ 1 ಮಚ್ಚೆ, ಬಲಭುಜದ ಮೇಲೆ 2, ಯದೆಯ ಬಲಭಾಗದಲ್ಲಿ 3 ನೆರಹುಲಿಗಳಿವೆ. ಖೈದಿ ಉಡುಪಿನ ತಪಸೀಲು—ಖೈದಿ ಫರಾರಿ ಕಾಲದಲ್ಲಿ ಮೈಮೇಲೆ ಬಂದು ಚಡ್ಡಿ ಬಂದು ಟೋಪಿ ಇತ್ತು. ಷರಾ—ಫರಾರಿ ಖೈದಿಯನ್ನು ವಸ್ತಗಿರಿ ಮಾಡಿದವರಿಗೆ 20 ರೂಪಾಯಿ ಇನಾಂ ಕೊಡಲ್ಪಡುವದು.

ಹೆಚ್. ಹೆಚ್. ಸ್ಪಾರ್ಕಸ್,
ಸೂಪರಿಟೆಂಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 9ನೇ ಜುಲೈ 1885.

ಸ್ವ 1884—85ನೇ ಇಸವಿಯ ಬಡ್ಡಿ ಪೈಸಲ್ ಬಗ್ಯೆ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ಸಾಧ್ಯವಾದ ಮಟ್ಟಿಗೆ ಜಾಗ್ರತೆಯಲ್ಲಿ ಹಾಜರ್ಮಾಡಬೇಕೆಂದು ಕೋಲಾರ ಡಿಸ್ಟ್ರಿಕ್ಟು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ದಾರರುಗಳು ಇದರಿಂದ ಕೋರಲ್ಪಟ್ಟಿರುತ್ತಾರೆ.

ಎ. ಚೆಲುವಯ್ಯಂಗಾರ್,
ಟ್ರೆಜರೀ ಆಫೀಸರ್.

ತಾರೀಖು 30ನೇ ಜುಲೈ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗೋರಿಬಿನೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ವಿವರಿಸಿರುವ ರಿಜಿಸ್ಟ್ರಿಯ ತಂಸೂಕು ಬೇವಾರಸಾಗಿ ನಿಂತಿರುತ್ತ, ಅದನ್ನ ಹಾಜರ್ಮಾಡಿದವರೆ ಆಗಲಿ ಅದರಲ್ಲಿ ಬಾಧ್ಯತೆ ವುಳ್ಳವರೇ ಆಗಲಿ ಈ ಲಾಗಾಯತು 1 ತಿಂಗಳೊಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಜಬಿ ಫೀಜು ಪಾವತೀ ಮಾಡಿ ವಾಪಸು ಪಡಿಯಬಹುದು, ತಪ್ಪಿದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅದು ನಾಶವಾಗಿಹೋಗುವದು.